ಅ) ಹಾಗಿದ್ದಲ್ಲಿ. ಎಷ್ಟು ಹಣದ ದುರುಪಯೋಗವಾಗಿದೆ :

ಇ) ಈ ದುರುಪಯೋಗದ ಪ್ರಕರಣ ಯಾವಾಗ ನಡೆದಿದೆ :

ಈ) ಈ ದುರುಪಯೋಗಕ್ಕೆ ಹೊಣೆಯಾದವರ ವಿರುದ್ಧ ಕೈಗೊಂಡಿರುವ ಕ್ರಮವೇನು :

ಉ) ಇನ್ನು ಮುಂದೆ ಈ ರೀತಿ ದೊಡ್ಡ ಪ್ರಮಾಣದ ದುರುಪಯೋಗ ತಪ್ಪಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಹೌದು.

ಆ) ಇತ್ತೀಚಿನ ತನಿಖೆ ವರದಿಯ ಪ್ರಕಾರ ರೂ. 2.10.25.355-50 ಗಳು.

ಇ) ಬಹುಶಃ 1984 ರಿಂದ ಇರಬಹುದು ಸರಿಯಾದ ದಿನಾಂಕ ತನಿಖೆ ಮುಗಿದ ಮೇಲೆ ಗೊತ್ತಾಗುತ್ತದೆ.

ಈ) 1) ಸಹಕಾರ ಕಾಯಿದೆ ಕಲಂ 70ರ ಮೇರೆಗೆ ವಸೂಲಾತಿಗಾಗಿ ದಾವೆ ಹಾಕಲಾಗಿದೆ.

2) ಕಲಂ 103 ರಂತೆ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

3) ಪೋಲೀಸ್ ಕೇಸನ್ನು ಹಾಕಿದೆ.

4) 6 ಜನರನ್ನು ಅಮಾನತ್ತಿನಲ್ಲಿಡಲಾಗಿದೆ.

ಉ) ಲೆಕ್ಕ ಹೊಂದಾಣಿಕೆ ವ್ಯವಸ್ಥೆ ಬಲಪಡಿಸಲಾಗಿದೆ ಹಾಗೂ ತನಿಖಾ ವ್ಯವಸ್ಥೆಯನ್ನು ತೀವ್ರಗೊಳಿಸಲಾಗಿದೆ.

ನಗರ ಕೇಂದ್ರ ಗ್ರಂಥಾಲಯದಿಂದ ಖರೀದಿಸಲಾಗಿರುವ ಗ್ರಂಥಗಳ ಬಗ್ಗೆ

1778. ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) 1991-92ನೇ ಸಾಲಿನ ಅಂತ್ಯದವರೆಗೆ (ಜನವರಿ ಅಂತ್ಯದವರೆಗೆ) ಬೆಂಗಳೂರು ನಗರ ಕೇಂದ್ರ ಗ್ರಂಥಾಲಯದಿಂದ ಖರೀದಿಸಲಾಗಿರುವ ಗ್ರಂಥಗಳ ಒಟ್ಟು ಸಂಖ್ಯೆ ಎಷ್ಟು ?

2) ಸದರಿ ಸಾಲಿನಲ್ಲಿ ಖರೀದಿಸಲಾಗಿರುವ ಗ್ರಂಥಗಳಿಗೆ ಪಾವತಿ ಮಾಡಿರುವ ಮೊಬಲಗು ಎಷ್ಟು ?

3) ಒಮ್ಮೆ ಖರೀದಿಸಲಾಗಿರುವ ಗ್ರಂಥಗಳನ್ನು ಮತ್ತೊಮ್ಮೆ ಅನಾವಶ್ಯಕವಾಗಿ ಖರೀದಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

4) ಹಾಗಿದ್ದಲ್ಲಿ. ಒಮ್ಮೆ ಖರೀದಿಸಿದ ಪುಸ್ತಕಗಳನ್ನು ಮತ್ತೊಮ್ಮೆ ಖರೀದಿಸಿ ಪಕ್ಷಪಾತ ಮಾಡಿರುವ ವ್ಯಕ್ತಿಗಳ ವಿರುದ್ಧ ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1) 72.317 ಗ್ರಂಥಗಳು.

2) 31.24.864-00 ರೂಪಾಯಿಗಳು.

3) ಇಲ್ಲ.

4) ಉದ್ಭವಿಸುವುದಿಲ್ಲ.

ವಕ್ಫ್ ಇಲಾಖೆಯಿಂದ ಬಿಡುಗಡೆಯಾದ ಹಣದ ಬಗ್ಗೆ.

1779. ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 1991-92ನೇ ಸಾಲಿನಲ್ಲಿ ವಕ್ಫ್ ಇಲಾಖೆಯ ವತಿಯಿಂದ ಯಾವ ಯಾವ ಜಿಲ್ಲೆಗಳಿಗೆ ಮಸೀದಿ. ಪ್ರಾರ್ಥನಾ ಮಂದಿರ. ಇತ್ಯಾದಿಗಳ ನಿರ್ಮಾಣ ಹಾಗೂ ದುರಸ್ತಿಗಾಗಿ ನೀಡಿರುವ ಹಣವೆಷ್ಟು ;

ಆ) ಗುಲ್ಬರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳ ವಿವಿಧ ಮಸೀದಿಗಳಿಗೆ ನೀಡಿರುವ ಹಣವೆಷ್ಟು ;

ಇ) ಈ ಕೆಲಸಗಳು ಯಾವ ಹಂತದಲ್ಲಿವೆ ಹಾಗೂ ಒಂದು ವೇಳೆ ಪೂರ್ತಿಯಾಗದಿದ್ದರೆ ಅವುಗಳನ್ನು ಪೂರ್ತಿಗೊಳಿಸಲು ಅನುದಾನ ನೀಡುವ ವ್ಯವಸ್ಥೆ ಮಾಡಲಾಗಿದೆಯೆ ;

ಈ) ಮಾಡಿದ್ದರೆ ಅವು ಯಾವ ಯಾವ ಮಸೀದಿಗಳು ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಅ) ನಿರ್ಮಾಣಕ್ಕೆ ಧನ ಸಹಾಯವಾಗಿ ರೂ. 4.40.000-00ನ್ನು ಕೊಟ್ಟಿರುವುದು ಈ ಕೆಳಗಿನಂತಿದೆ :-

1) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಕಾಂಪೌಂಡ್ ಗೋಡೆ ಕಟ್ಟಲು ರೂ. 2.50.000-00.

2) ಶ್ರೀರಂಗಪಟ್ಟಣದ ಬೊಮ್ಮೂರು ಅಗ್ರಹಾರದ ಸ್ಮಶಾನದ ಶಮಿಾರ್ ದರ್ಗಾದ ನಿರ್ಮಾಣಕ್ಕಾಗಿ ರೂ. 1.50.000-00.

3) ಮೊಯುದ್ದೀನ್ ಜುಮ್ಮ ಮಸ್ಜಿದ್. ಕಯರ್‌ತಡ್ಕ ಹಳ್ಳಿ. ಕಲಂಜ್ ಪೋಸ್ಟ್. ಬೆಳ್ತಂಗಡಿ ತಾಲ್ಲೂಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಸೀದಿ ಕಟ್ಟಲು ರೂ. 40.000-00.

ಆ) ಏನೂ ಇಲ್ಲ.

ಇ) ಏನೂ ಇಲ್ಲ.

ಈ) ಏನೂ ಇಲ್ಲ.